ಮೇಲ್ವರ್ಗ, ಕೆಳವರ್ಗ- ಹೀಗೆ ಒಂದೊಂದು ವಿಭಾಗದಲ್ಲೂ ಒಂದಷ್ಟು ಉಪಪ್ರಭೇದಗಳು ಸೇರಿಕೊಂಡು ರಾಮಾಯಣದ ದಶಾನನನಿಗೂ ಸಡ್ಡು ಹೊಡೆದ ಈಕೆ ಹೆಚ್ಚು ಕಡಿಮೆ ದ್ವಿದಶಾನನ ಹೊಂದಿದವಳು ಅನ್ನುವುದು ಅರಿವಾಗುತ್ತಾ ಬಂದರೂ ಅವಳ ಆ ರೂಪಗಳೆಲ್ಲ ದಿನಚರಿಯಲ್ಲಿ ಗೋಚರಕ್ಕೆ ಬಂದದ್ದು ಬಹಳ ಕಡಿಮೆ.

ಇಲ್ಲೊಂದು ಮಜಬೂತಾದ ಪ್ರಸಂಗ ಹೇಳಿಬಿಡುತ್ತೇನೆ. ಕಳೆದ ಶತಮಾನದ ಎಪ್ಪತ್ತರ ದಶಕದಾರಂಭದಲ್ಲಿ ನೆಂಟರ ಮನೆಯಲ್ಲಿದ್ದುಕೊಂಡು ಆ ಕಾಲದ ಒಂದು ವರ್ಷದ ಪಿಯೂಸಿ ಮುಗಿಸಿ ಮುಂದೇನು ಅನ್ನುವ ನಿರ್ದಿಷ್ಟ ಗುರಿ ಇಲ್ಲದೆ ಮನೆಯಲ್ಲೇ ಇದ್ದಾಗ ನನ್ನ ಸೀಮಿತ ಅನುಭವದಲ್ಲಿ ಕಥೆ, ಕವನ ಬರೆದು ಅವು ಪತ್ರಿಕೆಯಲ್ಲಿ ಪ್ರಕಟವಾಗಿ, ಆ ಪತ್ರಿಕೆ ವಾರಕ್ಕೊಮ್ಮೆ ಬರುವ ಅಂಚೆಯಣ್ಣನ ಮೂಲಕ ನನ್ನ ಕೈ ಸೇರಿದಾಗ 'ಓಹೋ, ನಾನೂ ಕೂಡ ದೊಡ್ಡ ದೊಡ್ಡ ಸಾಹಿತಿಗಳಂತೆ ಕನ್ನಡಮ್ಮನ ಸೇವೆಗೈಯ್ಯಬಹುದು' ಅನ್ನುವ ಅಹಂ ಉಕ್ಕಿ ಬಂದಿತ್ತು. ಮುಂದೆ ಕುಂದಾಪ್ರ ಕನ್ನಡದಲ್ಲಿ ಬರೆದ ಒಂದು ಕಥೆ ಮಾಸಪತ್ರಿಕೆಯೊಂದರಲ್ಲಿ ಪ್ರಕಟವಾಗಿ ಅದನ್ನು ಓದಿದ ಒಬ್ಬರು, 'ಇದೂ ಒಂದು ಕಥೇನಾ!? ಸ್ವಲ್ಪವೂ ಅರ್ಥವಾಗಲಿಲ್ಲ!' ಅಂತ ಪತ್ರ ಬರೆದಾಗ ನನ್ನ ಅಹಂ ಮುರಿದು ಪತ್ರ ವ್ಯವಹಾರ ಮಾತ್ರ ಹಾಗೇ ಮುಂದುವರಿದು ಕೊನೆಗೆ ಅವರೇ ನನ್ನ 'ಸಹಧರ್ಮಿಣಿ'ನಾಗುವುದರ ಮೂಲಕ ನಾನು ಕನ್ನಡನಾಡಿನ ಈ ದಕ್ಷಿಣದ ಸೀಮೆಗೆ ಬರುವಂತಾಯಿತು! ಹೀಗೆ ಕಡಲಕಡೆಯ ಮಲೆನಾಡಿನ ಕುಗ್ರಾಮವೊಂದರ (ಈಗದು ಕುಗ್ರಾಮವಲ್ಲ!) ತವರಿನಿಂದ ಬಿಳಿಗಿರಿರಂಗನ ಜಿಲ್ಲೆಗೆ ವಲಸೆ ಬರಲು ಕಾರಣಳಾದವಳು ಆ ನನ್ನ ಹೆತ್ತಮ್ಮ ಕುಂದಾಪ್ರ ಕನ್ನಡ!

ಈ ವಿಷಯ ಹಾಗಿರಲಿ, ಮೊದಲೇ ಹೇಳಿದಂತೆ- ಕೊರೋನಾಕ್ಕೂ ಒಂದು ವರ್ಷದ ಮೊದಲು ನಮಗಿಂತ ಸೂಪರ್ ಸೀನಿಯರ್ ಆದ ನಮ್ಮತ್ತೆ ವಯೋಸಹಜವಾಗಿ ಹಾಸಿಗೆ ಹಿಡಿದಾಗ- ಏಜೆನ್ಸಿಯೊಂದರ ಮೂಲಕ ಕೇರ್‌ಟೇಕರ್ ಒಬ್ಬರನ್ನು ನೇಮಿಸಿಕೊಳ್ಳುವುದು ಅನಿವಾರ್ಯವಾಗಿ ಒಟ್ಟು ಮೂರು ವರ್ಷಗಳ ಅವಧಿಯಲ್ಲಿ ಬರೋಬ್ಬರಿ ಇಪ್ಪತ್ತೆರಡು ಚೇಂಜ್ ಓವರ್ ನಡೆದು ರಾಜ್ಯದ ನಾನಾ ಭಾಗಗಳಿಂದ ಬಂದ ಒಟ್ಟು ಹದಿನೇಳು ಆಯಾಗಳು ಕನ್ನಡಮ್ಮನ ಪ್ರಾದೇಶಿಕ ಪ್ರತಿನಿಧಿಗಳಂತೆ ನಮ್ಮ ಮನೆ ಸೇರಿಕೊಂಡಿದ್ದರು! ಈ ಸಂಖ್ಯೆ ಇನ್ನೂ ಹೆಚ್ಚಾಗುವುದನ್ನು ತಪ್ಪಿಸಿದ್ದು ಆ ಕಾಲಕ್ಕೆ ದಾಳಿ ಇಟ್ಟ ಕೊರೋನಾ ಎಂಬ ಮಹಾಮಾರಿ! ಕೇವಲ ಹಿರಿಯ ನಾಗರಿಕರೇ ಇದ್ದ ನಮ್ಮ ಮನೆಗೆ ಆ ವೈರಸ್ ಯಾವ ರೂಪದಲ್ಲಾದರೂ ದಾಳಿ ಇಡಬಹುದು ಅನ್ನುವ ಆತಂಕದಲ್ಲಿ ನರ್ಸ್‌ಗಳು ರಜಾ ಹೋಗುವುದನ್ನೇ ಮುಂದೂಡುವಂತೆ ಮತ್ತು ರಜಾ ಹೋದರೂ ಪುನಃ ಅವರೇ ಬರುವಂತೆ ರಿಕ್ವೆಸ್ಟ್ ಮಾಡಿಕೊಂಡದ್ದರ ಪರಿಣಾಮ ಈ ಸಂಖ್ಯೆ ಇಷ್ಟಕ್ಕೇ ಸೀಮಿತಗೊಂಡಿತ್ತು! ಹೀಗೇ ನಮ್ಮನೆಗೆ ಕಾಲಿಟ್ಟ ಆ ಆಯಾಗಳಿಂದ ಕನ್ನಡಮ್ಮನ ದೇಸಿ ರೂಪಗಳ ಜೊತೆಗೆ ಕೆಲ ಸೋದರ ಭಾಷೆಗಳ ಮುಖ ಪರಿಚಯವೂ ಆಗಿ ಆ ಆಯಾಗಳೆಲ್ಲರ ಬದುಕು ಬವಣೆಯ ನಾನಾ ಆಯಾಮಗಳೂ ಅನಾವರಣಗೊಂಡು ಹೊರನೋಟಕ್ಕೆ 'ಮದುವೆಯಾಗಿ ಮಕ್ಕಳಾಗಿ ಎಲ್ಲರೂ ಸುಖವಾಗಿದ್ದರು' ಎಂಬ ಮಧ್ಯಮ ವರ್ಗದವರ ಕಥೆಗಳನ್ನೇ ಹೆಚ್ಚಾಗಿ ಕಂಡು ಕೇಳಿದ್ದ ನಮಗೆ ಇವರೆಲ್ಲರ ಬದುಕಿನ ದುರಂತ ಮುಖಗಳು ನಿಜಕ್ಕೂ ದಿಗ್ಭ್ರಮೆ ಹುಟ್ಟಿಸಿದ್ದವು. ಈ ಎಲ್ಲರ ಬದುಕು-ಭಾಷಾ ಸ್ವರೂಪವನ್ನು ವಿಸ್ತಾರವಾಗಿ ಹೇಳಲು ಹೊರಟರೆ ಅದೊಂದು ಪಿಎಚ್.ಡಿ ಪ್ರಬಂಧದ ಗಾತ್ರ ಪಡೆಯಬಹುದು! ಅಷ್ಟೊಂದು ಸಹನೆ ನನ್ನಲ್ಲಿಲ್ಲವಾದ್ದರಿಂದ ಮತ್ತು ಹೆಚ್ಚಿನವರದು ಅಲ್ಪಸ್ವಲ್ಪ ವ್ಯತ್ಯಾಸದ ಮೈಸೂರು ಸೀಮೆಯ ಆಡುಗನ್ನಡವಾದ್ದರಿಂದ ನನಗೆ ಫೆಮಿಲಿಯರ್ ಅನ್ನಿಸಿದ ಕೆಲವರ ಸಂಗತಿಗಳನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ.

ಹೀಗೆ ನಮ್ಮ ಮನೆಗೆ ಬಂದ ಮೊಟ್ಟಮೊದಲಿಗಳೆಂದರೆ ಚನ್ನರಾಯಪಟ್ಟಣದ ಹಳ್ಳಿಯೊಂದರ ಹೇಮಾವತಿ. ಯಥಾಪ್ರಕಾರ ಗಂಡಾಳ್ವಿಕೆಯ ಕೌಟುಂಬಿಕ ದೌರ್ಜನ್ಯಕ್ಕೊಳಗಾದ ಇಪ್ಪತ್ತೈದರ ಯುವತಿ. ಗಂಡ ಮನೆಯವರ ಇಚ್ಛೆಗೆ ವಿರುದ್ಧವಾಗಿ ಪ್ರೀತಿಸಿ ಮದುವೆಯಾದವನು. ಆದರೆ ಚೊಚ್ಚಲ ಮಗು ಹೆಣ್ಣಾದ ತಕ್ಷಣ ಹೆತ್ತವರ ಮಾತು ಕೇಳಿ ತನ್ನನ್ನು ತೊರೆದು ಪುನಃ ಸೋದರಮಾವನ ಮಗಳನ್ನು ಮದುವೆಯಾದ ಭೂಪ. ಚಿಕ್ಕ ಕೂಸನ್ನು ತನ್ನಕ್ಕನ ವಶಕ್ಕೆ ಒಪ್ಪಿಸಿ ಈಕೆ ಈ ಕೆಲಸಕ್ಕೆ